**ಕರ್ನಾಟಕ ಸರ್ಕಾರ**

**ವಿಶೇಷ ನೇಮಕಾತಿ ಸಮಿತಿ**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,
ಆರೋಗ್ಯ ಸೌಧ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–23

ಇ–ಮೇಲ್ ವಿಳಾಸ **hfwdrc@gmail.com**, ದೂ:080–22340197


ಸಂಖ್ಯೆ: ಎಸ್‌ಆರ್‌ಸಿ/ರಿಟ್/45/2020–21 ದಿನಾಂಕ: 08.03.21

**ಸುತ್ತೋಲೆ**

ವಿಷಯ:– 889–ಶುಶ್ರೂಷಕರು (ಡಿಪ್ಲೊಮ) ಹುದ್ದೆಯ ಅಂತಿಮ ಆಯ್ಕೆಪಟ್ಟಿಯಿಂದ ವಂಚಿತರಾದ ಅಭ್ಯರ್ಥಿಗಳು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿರುವ ಬಗ್ಗೆ.

ಉಲ್ಲೇಖ:– ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 9894/2020 C/w 11106/2020ರಲ್ಲಿ ಶ್ರೀಮತಿ ಉಷಾಕುಮಾರಿ ಎ.ಎಸ್, ಮತ್ತು ಇತರರು ಹಾಗೂ ಶ್ರೀ ಚನ್ನಬಸಪ್ಪ ಮತ್ತು ಇತರರು ಹೂಡಿರುವ ಅರ್ಜಿಯಲ್ಲಿ ದಿನಾಂಕ:15.09.2020ರಂದು ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಆದೇಶ

*********

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಸೂಚನೆ ಸಂಖ್ಯೆ:ಎಸ್‌ಆರ್‌ಸಿ/21/2017–18, ದಿನಾಂಕ: 20.06.2017ರಲ್ಲಿ 889–ಶುಶ್ರೂಷಕರು ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಮೂಲ ದಾಖಲಾತಿ ಪರಿಶೀಲನೆ ನಡೆಸಿ ದಿನಾಂಕ: 16.07.2020ರಂದು ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಅದರಂತೆ ಅಂತಿಮ ಆಯ್ಕೆ ಪಟ್ಟಿಯಲ್ಲಿ ಅರ್ಹತಾ ಮತ್ತು ಮೀಸಲಾತಿಯಡಿಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಸಂಬಂಧ ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ವರದಿಗಳನ್ನು ಪಡೆದು ಹಂತ ಹಂತವಾಗಿ ನೇಮಕಾತಿ ಆದೇಶ ನೀಡಲಾಗುತ್ತಿದೆ.

ಮುಂದುವರೆದು, ಸದರಿ ನೇಮಕಾತಿಗೆ ಸಂಬಂಧಿಸಿದಂತೆ ಶ್ರೀಮತಿ ಉಷಾಕುಮಾರಿ ಎ.ಎಸ್ ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:9894/2020 C/w ಸಂಖ್ಯೆ:11106/2020ರಲ್ಲಿ ಶ್ರೀ ಚನ್ನಬಸಪ್ಪ ಮತ್ತು ಇತರರು ಸರ್ಕಾರದ ವಿರುದ್ಧ ದಾವೆ ಹೂಡಿದ್ದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ:15.09.2020ರ ಆದೇಶದಂತೆ ಹಾಗೂ ಸರ್ಕಾರಿ ವಕೀಲರು, ಅಡ್ವೋಕೇಟ್ ಜನರಲ್‌ರವರ ಕಛೇರಿ, ಇವರ ಪತ್ರ ಸಂಖ್ಯೆ:5849/ಜಿಎ/2020–21, ದಿನಾಂಕ:15.12.2020ರಲ್ಲಿ ಈ ಕೆಳಕಂಡಂತೆ ಸೂಚಿಸಿರುತ್ತಾರೆ.

**" .... it would be apt and appropriate to direct the respondents to notify all the candidates who have been selected about pendency of this writ petition and the appointment orders if any, issued to them pursuant to Annexure-L, would be subject to result of this writ petition and they would not be entitled to claim any equities".**

ಈಗಾಗಲೇ 889–ಶುಶ್ರೂಷಕರು ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಎಲ್ಲಾ ಅಭ್ಯರ್ಥಿಗಳಿಗೂ ಅವರ ಆಯ್ಕೆ ಹಾಗೂ ನೇಮಕಾತಿ, ರಿಟ್ ಅರ್ಜಿ ಸಂಖ್ಯೆ:9894/2020 C/w 11106/2020ರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೊಳಪಟ್ಟಿರುತ್ತದೆ ಎಂದು ಈ ಮೂಲಕ ಸೂಚಿಸಲಾಗಿದೆ.

ನಿರ್ದೇಶಕರು,
ಆರೋಗ್ಯ ಮತ್ತು ಕು.ಕ.ಸೇವೆಗಳ ನಿರ್ದೇಶನಾಲಯ,
ಬೆಂಗಳೂರು

ಇವರಿಗೆ,

889–ಶುಶ್ರೂಷಕರು (ಡಿಪ್ಲೊಮ) ಹುದ್ದೆಗೆ
ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುವ
ಎಲ್ಲಾ ಶುಶ್ರೂಷಕರುಗಳಿಗೆ.

ಪು.ತಿ.ನೋ

HK...

ಪ್ರತಿಯನ್ನು:

1. ಸರ್ಕಾರಿ ವಕೀಲರು, ಅಡ್ವೋಕೇಟ್ ಜನರಲ್ ಕಛೇರಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಅಂಬೇಡ್ಕರ್ ವೀದಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕು.ಕ.ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸ ಸೌಧ, ಬೆಂಗಳೂರು.
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
4. ನಿರ್ದೇಶಕರ ಆಪ್ತ ವಿಭಾಗ, ಆರೋಗ್ಯ ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
5. ಮುಖ್ಯ ಆಡಳಿತಾಧಿಕಾರಿಗಳು, ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
6. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು/ಮುಖ್ಯ ವೈದ್ಯಾಧಿಕಾರಿಗಳು/ ಆಡಳಿತಾಧಿಕಾರಿಗಳು ಇವರಿಗೆ ಮಾಹಿತಿಗಾಗಿ ಕಳುಹಿಸುತ್ತಾ ದಿನಾಂಕ:16.07.2020ರ ಶುಶ್ರೂಷಕರ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಗೊಂಡು ಕರ್ತವ್ಯಕ್ಕೆ ಹಾಜರಾಗಿರುವ ಶುಶ್ರೂಷಕರಿಗೆ ಜಾರಿ ಮಾಡಲು ತಿಳಿಸಿದೆ.

HK...